ವಾರದ ಪತ್ರ

## ಹಾಡಿದ್ದೇ ಹಾಡು ಕಿಸಬಾಯಿ ದಾಸ

ಕೇವಲ ಪಟ್ಟಣದ ಸಿರಿಸಂಪತ್ತಿನ ವೈಭವೀಕರಣದ ಮನೆ, ಪರಿಸರದಿಂದ ಕೂಡಿದ ಧಾರಾವಾಹಿಗಳೇ ಅಧಿಕ. ಒಂದು ಹೆಣ್ಣು ಸೌಮ್ಯತೆಯ ಪ್ರತಿನಿಧಿ. ಇನ್ನೊಂದು ಕುಟಿಲ, ಕುಯುಕ್ತಿಗಳ ಹೆಂಗಸು. ಈ ಮಧ್ಯೆ ತೊಳಲಾಟದ ಗಂಡು ಮತ್ತು ಮನೆತನದ ಜನ. ಇವುಗಳನ್ನೇ ತೋರಿಸುತ್ತಾ ಕುಟಿಲ ಯುಕ್ತಿಗಳವರದೇ ಮೇಲುಗೈ. ಇನ್ನೊಂದು ಗುಂಪಿನವರದು ಸೋಲುಗೈ, ಹೊಂದಿರುವ ಏನೊಂದು ಸಂದೇಶವಿರದ ಧಾರಾವಾಹಿಗಳಿಂದ ತಲೆಚಿಟ್ಟು ಹಿಡಿಯುತ್ತಿದೆ. ಹಳ್ಳಿಯ ಜೀವನ, ಪ್ರತಿಕೃತಿ, ಪ್ರತಿಬಿಂಬಿಸುವ ಧಾರಾವಾಹಿಗಳಲ್ಲಿಯೂ ಕಾಣುತ್ತಿಲ್ಲ.

—ನಾ.ಮ. ಮರುಳಾರಾಧ್ಯ, ನಾಗರಾಳು, ಆಂಧ್ರಪ್ರದೇಶ

## ಚಂದನಕ್ಕೆ ಕನ್ನಡಿಗರ ನಮನ

4.1.2019 ರಂದು 84ನೆಯ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಚಂದನ ವಾಹಿನಿ ಬೆಳಗಿನಿಂದ ಸಂಜೆಯವರೆಗೆ ನೇರ ಪ್ರಸಾರದ ಮೂಲಕ ಕರ್ನಾಟಕದ ಮೂಲೆ ಮೂಲೆ ಮನೆ ಮನೆಗೆ ತಲಪುವಂತೆ ಮಾಡಿತು. ಸಾಹಿತ್ಯ ದಿಗ್ಗಜರನ್ನು ವೈಭವದ ಮೆರವಣಿಗೆ, ಜನಜಾತ್ರೆಯ ದೃಶ್ಯಗಳು ಸುಂದರವಾಗಿತ್ತು. ಸಾಹಿತ್ಯ ಪರಿಷತ್‌ನ ಹಾಲಿ, ಮಾಜಿ ಅಧ್ಯಕ್ಷರ ಭಾಷಣಗಳು. ಉತ್ತರ ಕರ್ನಾಟಕದ ಅನೇಕ ಸಾಧಕರಿಗೆ ಸನ್ಮಾನ ಗೌರವಗಳು, ಪುಸ್ತಕ ಬಿಡುಗಡೆ ಸಮಾರಂಭ ಒಂದೇ ಎರಡೇ ಸಭೆಯ ಮಧ್ಯದಲ್ಲಿ ಬಂದು ಕುಳಿತಂತೆ ಭಾಸವಾಗುತ್ತಿತ್ತು. ಮನಕ್ಕೆ ಮುದ ನೀಡುವ ದೃಶ್ಯಗಳನ್ನು ಮನೆಯಲ್ಲೇ ಕುಳಿತು ವೀಕ್ಷಿಸುವ ಅಭಿಮಾನಿಗಳಿಗೆ ಹಬ್ಬದೂಟದಂತಾಯಿತು. ಆರಾಮವಾಗಿ ವೀಕ್ಷಿಸಲು ಅನುವು ಮಾಡಿಕೊಟ್ಟ ಚಂದನ ವಾಹಿನಿಗೆ ಅಭಿನಂದನೆಗಳು.

—ಲಲಿತಾ ಅಂಬಾಗಿಲು, ಉಪ್ಪುಂದ

## ಸ್ವಂತಿಕೆ ಇಲ್ಲದ ಡ್ರಾಮಾ ಜೂನಿಯರ್

ತುಂಬಾ ಜನಪ್ರಿಯತೆಯನ್ನು ಪಡೆದಿರುವ ರಿಯಾಲಿಟಿ ಶೋ ಡ್ರಾಮಾ ಜೂನಿಯರ್. ಆದರೆ ಡ್ರಾಮಾ ಜ್ಯೂನಿಯರ್ ಸೀಜನ್ 1 ಮತ್ತು ಸೀಜನ್ 2 ಶೋಗಳಲ್ಲಿದ್ದ ಲವಲವಿಕೆ ಡ್ರಾಮಾ ಜೂನಿಯರ್ ಸೀಜನ್ 3ದಲ್ಲಿ ಕಂಡು ಬರುತ್ತಿಲ್ಲ. ಡ್ರಾಮಾ ಜೂನಿಯರ್ ಸೀಜನ್ 3 ತನ್ನ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ. ಸೀಜನ್ 3ರಲ್ಲಿ ಅಭಿನಯಿಸಲ್ಪಡುತ್ತಿರುವ ಸ್ಕಿಟ್‌ಗಳಲ್ಲಿ ಪೌರಾಣಿಕ ಕತೆಗಳನ್ನು ಆಧರಿಸಿದ ಸ್ಕಿಟ್‌ಗಳು ಮತ್ತು ಸಾಧಕರ ಜೀವನದ ಬಗ್ಗೆ ತಯಾರಿಸಿದ ಸ್ಕಿಟ್‌ಗಳಲ್ಲಿ ಮಾತ್ರ ಸ್ವಂತಿಕೆ ಕಂಡು ಬರುತ್ತದೆ. ಆದರೆ ಉಳಿದ ಸ್ಕಿಟ್‌ಗಳಲ್ಲಿ ಕೆಲವು ತುಂಬ ಕಳಪೆಯಾಗಿವೆ. ಹಾಸ್ಯದ ಹೆಸರಿನಲ್ಲಿ ಸ್ಕಿಟ್‌ಗಳಲ್ಲಿ ಅಂಗಚೇಷ್ಟೆಯೇ ಹೆಚ್ಚಾಗಿ ಕಂಡು ಬರುತ್ತದೆ.

ನೈಸರ್ಗಿಕವಾಗಿ ಹಾಸ್ಯ ಹೊರಹೊಮ್ಮಬೇಕಾದರೆ ಆಡುವ ಮಾತಿನಲ್ಲಿ ಪಂಚ್ ಇರಬೇಕೇ ಹೊರತಾಗಿ ಅಂಗಚೇಷ್ಟೆಯ ಮೂಲಕ ಪ್ರೇಕ್ಷಕರನ್ನು ನಗಿಸುವುದಲ್ಲ. ವೃದ್ಧಾಶ್ರಮದ ಬಗ್ಗೆ ತಯಾರಿಸಿದ ಸ್ಕಿಟ್ ಹಾಸ್ಯದ ಹೆಸರಿನಲ್ಲಿ ವೃದ್ಧಾಶ್ರಮದಲ್ಲಿ ವಾಸಿಸುವ ವೃದ್ಧ ಪುರುಷರನ್ನು ಅಪಹಾಸ್ಯ ಮಾಡಿದಂತಿತ್ತು. ಡ್ರಾಮ ಜೂನಿಯರ್ ಸೀಜನ್ 3ರಲ್ಲಿ ಮಾಡುತ್ತಿರುವ ಒಂದು ಅತ್ಯುತ್ತಮವಾದ ಕೆಲಸವೆಂದರೆ ಪಠ್ಯಪುಸ್ತಕದಲ್ಲಿರುವ ಕೆಲವು ಪಾಠಗಳನ್ನು ಅಭಿನಯಕ್ಕೆ ಅಳವಡಿಸಿರುವುದು. ಡ್ರಾಮಾ ಜೂನಿಯರ್ ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳಲಿ ಎಂಬುದೇ ನನ್ನ ಕಳಕಳಿಯ ಮನವಿ.

—ಮುರಳೀಧರ ಕುಲಕರ್ಣಿ, ಬೀದರ್

## ಸುಬ್ಬಲಕ್ಷ್ಮಿ ಸಂಸಾರ

'ಸುಬ್ಬಲಕ್ಷ್ಮಿ ಸಂಸಾರ' ಈಗ ಚೆನ್ನಾಗಿ ಮೂಡಿ ಬರುತ್ತಿದೆ. ಸುಬ್ಬಲಕ್ಷ್ಮಿ ಆಫೀಸಿಗೆ ಹೋಗುವುದು, ಮನೆ ನೋಡಿಕೊಳ್ಳುವುದು ಒಂದು ರೀತಿ ಮಜಾ ಅನ್ನಿಸುತ್ತದೆ. ಅಥರ್ವನ ಅಭಿನಯ ನಗೆ ತರಿಸುವಂಥದು. ಇನ್ನು ಮುಂದೆ ಏನೇನು ಪ್ರಕರಣ ಆಗುವುದೋ ನೋಡೋಣ. ಶಕ್ಯವಿದ್ದಷ್ಟು ನಗಿಸುವ ವಾತಾವರಣ ಇರಲಿ.

—ರುಕ್ಮಿಣಿ ಕೃ ದೇಶಪಾಂಡೆ, ಗೋಕಾಕ

## ಸುಂದರ ಜಾನಕಿ

ಜಂಗಮದುರ್ಗದ ಎಸ್ಪಿ ಆನಂದ್ ಬೆಳಗೂರು ಅನಾಮಿಕ ದೂರಿನ ಬಗ್ಗೆ ತನಿಖೆಯನ್ನು ಮಾಡಲು ಮಗಳು ಜಾನಕಿಯ ಮನೆಗೆ ಬಂದಿದ್ದಾನೆ. ತನಿಖೆ ಮಾಡುತ್ತಾ ನಿರಂಜನ್ ಧಾವಳಿಯಿಂದ ನಿಮ್ಮ ಬದುಕು ನಾಶವಾಯಿತಲ್ಲ? ಎಂದು ಪ್ರಶ್ನಿಸುತ್ತಾರೆ.

ಅದಕ್ಕೆ ಜಾನಕಿ ಯಾರಾದರೂ ಐಎಎಸ್ ಅಧಿಕಾರಿ ಮದುವೆಯಾಗಿದ್ದರೆ ನನ್ನ ಬದುಕು ಸುಂದರವಾಗಿರುತ್ತಿತ್ತು ಅಂತ ಏನಾದರೂ ಗ್ಯಾರಂಟಿ ಇದೆಯಾ? ಎನ್ನುತ್ತಾಳೆ. ಇದು ವಾಸ್ತವವನ್ನು ಧ್ವನಿಸುತ್ತದೆ.

ಭಾವಾಭಿನಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ, ಟಿ.ಎನ್. ಸೀತಾರಾಮ್ ಅವರ 'ಮಗಳು ಜಾನಕಿ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಪಾತ್ರಧಾರಿಗಳ ಧಿರಿಸು ಕೂಡ ಗಮನ ಸೆಳೆಯುತ್ತಿದೆ.

—ಅನಂತ ಪದ್ಮನಾಭ ಎಚ್. ಎಂ. ಮೈಸೂರು, ಸುಲೋಚನಾ ವಾದಿರಾಜ್, ಹೊಳೆ ಹೊನ್ನೂರು

## ಚೇತೋಹಾರಿ ಬಾಲಹನುಮ

ಉದಯದ 'ಜೈ ಹನುಮಾನ್'ನಲ್ಲಿ ಆಂಜನೇಯನ ಬಾಲ್ಯದ ವೃತ್ತಾಂತವನ್ನು ಹಂತ ಹಂತವಾಗಿ ಅಭಿವ್ಯಕ್ತಿಸುತ್ತಾ ಬಂದಿದೆ. ಪಾತ್ರಗಳು ಸಮರ್ಪಕ ಭಾವದಲ್ಲಿ ಜೀವಕಳೆಯ ನಲಿವಿದೆ. ಬಾಲಹನುಮನ ಪಾತ್ರ ಚೇತೋಹಾರಕವಾಗಿದೆ. ದೃಶ್ಯಕಾವ್ಯ ಮೂಡಿಬರುತ್ತಿದೆ.

—ಪೂರ್ಣಿಮಾ ಮೂರ್ತಿ ಬೆಂಗಳೂರು

## ಶಾಂತರಾಜುವನ್ನೂ ಪೋಷಿಸಿ

ನಿರಂಜನನ ಮನೆಯರಿಗೆಲ್ಲ ಅನುಕೂಲವಾದ ಕೆಲಸಗಳು, ಸುಸ್ಸಜಿತವಾದ ಮನೆ, ನೆಮ್ಮದಿಯಾಗಿ ಉಂಡು ಉಟ್ಟು ಕಾಣೆಯಾಗಿರುವ ಶಾಂತರಾಜುವಿನ ಬಗ್ಗೆ ಚಿಂತೆ ಇಲ್ಲದ ಹಾಗಿದ್ದಾರೆ. ನಿಲ್ಲಲು ನೆಲೆ ಇಲ್ಲದೆ, ಜ್ವರದಿಂದ ಬಳಲುತ್ತಿದ್ದ ಬಡಪಾಯಿ ಶಾಂತರಾಜು ಎಲ್ಲಿ ಹೋದರು? ಭಾರ್ಗಿ ಕಡೆಯವರಿಗೇನಾದರೂ ಸಿಕ್ಕಿ ಬಿದ್ದಿದ್ದಾರೋ? ಚಿಂತೆಯಿಲ್ಲ. ತನ್ನ ಪತ್ನಿಗೆ ಶುಭಾಶಯ ಕೋರಲು ಹೊಸ ಮನೆಯ ವಿಳಾಸವನ್ನು ಹೇಗೆ ಹುಡುಕಿ ಬಂದರು? ಶಾಂತರಾಜು ಕಡೆಗೂ ಸ್ವಲ್ಪ ಗಮನ ಹರಿಸಿದಲ್ಲಿ ನಮ್ಮ ಚಿಂತೆ ಬಗೆಹರಿದೀತು.

—ಮೀರಾ ಮೋಹನ್, ಕ್ಯಾಲಿಫೋರ್ನಿಯ

ಕುಕ್ ಒಬ್ಬ ಇರಲಿ: ಭಾರ್ಗಿ ಒಬ್ಬ ದೊಡ್ಡ ಉದ್ಯಮಿ ಮತ್ತು ರಾಜಕಾರಣಿ. ಸರ್, ಭಾರ್ಗಿ ಮನೆಗೆ ಒಬ್ಬ ಅಡುಗೆಯವನನ್ನು ಹುಡುಕಿ ಕೊಡಿ.

—ವಿ.ತಿಪ್ಪೇಸ್ವಾಮಿ (ವಿ.ಟಿ) ಹಿರಿಯೂರು.

## ಮುಗಿದರೆ ಸಾಕು

ಮುಗ್ಧಳಾದ ಸುಬ್ಬಲಕ್ಷ್ಮಿಯ ಸಂಸಾರ ಮೊದಲು ವೀಕ್ಷಕರನ್ನು ಹಿಡಿದಿಡಲು ಸಮರ್ಥವಾಗಿದ್ದರೂ ಈಗೀಗ ಬರೀ ಶಣಯಾ ಸುಬ್ಬಲಕ್ಷ್ಮಿಯ ನಡುವಿನ ಸವಾಲ್ ಜವಾಬ್ ಆಗಿ ಏನೂ ಸ್ವಾರಸ್ಯ ಉಳಿಸಿಕೊಂಡಿಲ್ಲ. ಗುರುಮೂರ್ತಿ ಬರೀ ರೆಫ್ರಿ ಆಗಿ ಉಳಿದಿದ್ದಾನೆ. ಅದರಲ್ಲೂ ಶಣಯಾಳನ್ನು ಪಣದಲ್ಲಿ ಸೋಲಿಸಲು ಮಾಡುವ ಯತ್ನ ಕೆಟ್ಟ ಸಂದೇಶ ನೀಡುತ್ತದೆ. ರಸ್ತೆಯಲ್ಲೇ ರಚ್ಚೆ ಹಿಡಿಯುವುದು, ಬೇರೆ ಮಗುವಿನ ಕೈಲಿದ್ದ ಐಸ್ ಕ್ರೀಮ್ ಕಿತ್ತು ಕೊಡುವಂತೆ ಹಠ ಮಾಡುವುದು ಮಕ್ಕಳಿಗೆ ತಪ್ಪು ಸಂದೇಶ ನೀಡುತ್ತದೆ.ಶಣಯಳಿಗೆ ಬುದ್ಧಿ ಕಲಿಸಲು ಬೇರೆ ದಾರಿಗಳಿಲ್ಲವೇ? ಒಟ್ಟಿನಲ್ಲಿ ಧಾರಾವಾಹಿ ಹಳಿ ತಪ್ಪುತ್ತಿದೆ. ಗುರುಮೂರ್ತಿ, ಸುಬ್ಬಿಯ ಸಂಸಾರ ಆದಷ್ಟು ಬೇಗ ಸರಿ ಮಾಡಿ ಧಾರಾವಾಹಿ ಮುಗಿಸಿ ವೀಕ್ಷಕರಿಗೆ ಮುಕ್ತಿ ನೀಡಿ.

—ಗೀತಾ ನೆಲ್ಲೀಕಾಯಿ